ನಮೂನೆ - XIV

# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟಿದೆ)

## ಅಪಾವತಿಯ ಕಾರಣಕ್ಕಾಗಿ ವಿದ್ಯುತ್ ಸರಬರಾಜನ್ನು ನಿಲ್ಲಿಸುವ ಬಗ್ಗೆ ತಿಳುವಳಿಕೆ ಪತ್ರ

**ವಿದ್ಯುಚ್ಛಕ್ತಿ ಸರಬರಾಜು ಸಂಹಿತೆ 4.18, ವಿದ್ಯುಚ್ಛಕ್ತಿ ಕಾಯಿದೆ 2003ರ ಪರಿಚ್ಛೇಧ 56(1)ರೊಂದಿಗೆ ವ್ಯಾಖ್ಯಾನಿಸಿದಂತೆ**

ಶ್ರೀ/ಶ್ರೀಮತಿ.........................................
.............................................................
.............................................................
...................................................................

ತಮ್ಮ ಸ್ಥಾಪನದ ರೆವಿನ್ಯೂ ರಿಜಿಸ್ಟ್ರೇಷನ್ ಸಂಖ್ಯೆ ...................................................ಲೆಕ್ಕ ಖಾತೆ ಗುರುತು ಸಂಖ್ಯೆ ...........................................................ಗೆ ಸಂಬಂಧಿಸಿದಂತೆ ತಾವು ............................ ತಿಂಗಳಿಗೆ ಸಂಬಂಧಿಸಿದ ವಿದ್ಯುತ್ ಬಳಕೆ ಶುಲ್ಕ ರೂ......................................(ಪಾವತಿಸಬೇಕಾದ ಗಡುವು ದಿನಾಂಕ........................)ಅನ್ನು ಪಾವತಿಸುವಲ್ಲಿ ವಿಫಲರಾಗಿರುತ್ತೀರಿ. ಇದು, ವಿದ್ಯುಚ್ಛಕ್ತಿ ಸರಬರಾಜು ಸಂಹಿತೆ 4.18, ವಿದ್ಯುಚ್ಛಕ್ತಿ ಕಾಯಿದೆ 2003ರ ಪರಿಚ್ಛೇಧ 56(1)ರ ಉಲ್ಲಂಘನೆಯಾಗಿದೆ. ಆದ್ದರಿಂದ, ತಾವು ದಿನಾಂಕ..............................ರಂದು ಅಥವಾ ಅದಕ್ಕೆ ಮುಂಚಿತವಾಗಿ ರೂ..............................ನ್ನು ಪಾವತಿಸಬೇಕೆಂದು ಕೋರಲಾಗಿದೆ. ಪಾವತಿಸಲು ವಿಫಲರಾದಲ್ಲಿ, ಮುಂದಿನ ಯಾವುದೇ ಸೂಚನೆ ಇಲ್ಲದೆ ತಮ್ಮ ಸ್ಥಾಪನಕ್ಕೆ ಕಲ್ಪಿಸಿರುವ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿ ವಿದ್ಯುತ್ ಸರಬರಾಜನ್ನು ನಿಲ್ಲಿಸಲಾಗುತ್ತದೆ.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್
(ಮೊಹರಿನ ಸಹಿತ)

ಹೆಸರು:

ದಿನಾಂಕ:

**ಗಮನಿಸುವಿಕೆಗಾಗಿ:**

ವಿದ್ಯುತ್ ಬಿಲ್ಲುಗಳನ್ನು ಸ್ವೀಕರಿಸುವ ವಿಧಾನಗಳು :

- ಬೆ.ವಿ.ಕಂ. ನಗದು ಕೌಂಟರುಗಳು
- ಬೆ.ವಿ.ಕಂ. ಎ.ಟಿ.ಪಿ. ಕೌಂಟರುಗಳು
- ಬೆಂಗಳೂರು ಒನ್
- ಬಿಲ್ ಡೆಸ್ಕ್
- ಬಿಲ್ ಜಂಕ್ಷನ್
- ಈಸಿ ಬಿಲ್

## ಸಾಮಾನ್ಯ ಸೂಚನೆಗಳು

1. ವಿದ್ಯುಚ್ಛಕ್ತಿ ಕಾಯಿದೆ 2003ರ ಪರಿಚ್ಛೇಧ 171ರ ವ್ಯಾಖ್ಯಾನದೊಂದಿಗಿನ ದಾಖಲೆಗಳು, ಆದೇಶಗಳು, ತಿಳಿವಳಿಕೆ ಪತ್ರಗಳ ಅಡಿಯಲ್ಲಿ, ಈ ತಿಳಿವಳಿಕೆ ಪತ್ರವನ್ನು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು ವಿದ್ಯುತ್ ಸರಬರಾಜು ಶುಲ್ಕ ಪಾವತಿಸದ ತಪ್ಪಿತಸ್ಥ ಗ್ರಾಹಕರಿಗೆ ಜಾರಿಗೊಳಿಸತಕ್ಕದ್ದು.

2. ಯಾವುದೇ ಸ್ಪಷ್ಟೀಕರಣಕ್ಕಾಗಿ ದಯವಿಟ್ಟು ಸಂಬಂಧಿತ ಉಪವಿಭಾಗವನ್ನು ಸಂಪರ್ಕಿಸಿ.

3. ಪಾವತಿಯ ವಿಧಾನ:

   ಗ್ರಾಹಕರು ವಿದ್ಯುತ್ ಸರಬರಾಜು ಶುಲ್ಕವನ್ನು ಕೆಳಗೆ ಸೂಚಿಸಿರುವಂತೆ ಬಿಲ್ ವಿತರಿಸುವ ಕಚೇರಿ ಅಥವಾ ವ್ಯಾಪ್ತಿಯಲ್ಲಿನ ನಗದು ಕೌಂಟರುಗಳಲ್ಲಿ ಪಾವತಿಸಬಹುದಾಗಿದೆ:

   ಎ) ಕಂದಾಯ ಬಿಲ್‌ಗಳು: ರೂ.10,000/–ದವರೆಗಿನ ಮಾಸಿಕ ವಿದ್ಯುತ್ ಬಳಕೆ ಶುಲ್ಕವನ್ನು ನಗದು, ಅಥವಾ ಚೆಕ್ ಅಥವಾ ಡಿಮ್ಯಾಂಡ್ ಡ್ರಾಫ್ಟ್ ಮೂಲಕ, ರೂ.10,000/–ಕ್ಕಿಂತ ಹೆಚಿನ ಮೊಬಲಗನ್ನು ಚೆಕ್ ಅಥವಾ ಡಿಮ್ಯಾಂಡ್ ಡ್ರಾಫ್ಟ್ ಮೂಲಕವೇ ಪಾವತಿಸತಕ್ಕದ್ದು.

   ಬಿ) ಇತರೆ ಲೆಕ್ಕ ಶೀರ್ಷಿಕೆಯಡಿಯಲ್ಲಿನ ಶುಲ್ಕಗಳನ್ನು (ಕಂದಾಯ ಬಿಲ್ ಹೊರತುಪಡಿಸಿ) ರೂ.10,000/–ದವರೆಗಿನ ಮಾಸಿಕ ವಿದ್ಯುತ್ ಬಳಕೆ ಶುಲ್ಕವನ್ನು ಚೆಕ್ ಅಥವಾ ಡಿಮ್ಯಾಂಡ್ ಡ್ರಾಫ್ಟ್ ಮೂಲಕ, ರೂ.10,000/–ಕ್ಕಿಂತ ಹೆಚಿನ ಮೊಬಲಗನ್ನು ಚೆಕ್ ಅಥವಾ ಡಿಮ್ಯಾಂಡ್ ಡ್ರಾಫ್ಟ್ ಮೂಲಕವೇ ಪಾವತಿಸತಕ್ಕದ್ದು.

   ಸಿ) ಗ್ರಾಹಕರು ತಮ್ಮ ಮಾಸಿಕ ವಿದ್ಯುತ್ ಬಳಕೆ ಶುಲ್ಕವನ್ನು ಎಲೆಕ್ಟ್ರಾನಿಕ್ ಕ್ಲಿಯರೆನ್ಸ್ ವ್ಯವಸ್ಥೆ(ಇ.ಸಿ.ಎಸ್), ಬೆಂಗಳೂರು ಒನ್, ಕ್ರೆಡಿಟ್ ಮತ್ತು ಡೆಬಿಟ್ ಕಾರ್ಡ್ ಮೂಲಕ, ಹಾಗೂ ಬಿಲ್ ಡೆಸ್ಕ್, ಬಿಲ್ ಜಂಕ್ಷನ್ ಮತ್ತು ಈಸಿ ಬಿಲ್‌ನಂತಹ ಆನ್–ಲೈನ್ ಸೌಲಭ್ಯದ ಮೂಲಕ ಪಾವತಿಸಬಹುದಾಗಿದೆ.

4. **ಸೂಚಿತ ಗರಿಷ್ಠ ಕಾಲಮಿತಿ** :

   ✓ ಗಡುವು ದಿನಾಂಕದ ನಂತರ 15 ದಿನಗಳ ತಿಳಿವಳಿಕೆ ಕಾಲಾವಧಿ, ತಪ್ಪಿದಲ್ಲಿ ಸ್ಥಾಪನಕ್ಕೆ ಕಲ್ಪಿಸಿರುವ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿ ಸರಬರಾಜನ್ನು ನಿಲ್ಲಿಸಲಾಗುತ್ತದೆ.

   ✓ ಪಟ್ಟಣ ಹಾಗೂ ನಗರಗಳಲ್ಲಿ ಪಾವತಿಯ ದಿನಾಂಕದಂದೇ, ಗ್ರಾಮೀಣ ಪ್ರದೇಶಗಳಲ್ಲಿ ಪಾವತಿ ಸ್ವೀಕರಿಸಿದ 24 ಗಂಟೆಗಳೊಳಗೆ.

ವಿದ್ಯುಚ್ಛಕ್ತಿ ಸಂಬಂಧವಾದ ಯಾವುದೇ ದೂರುಗಳು/ಸಲಹೆಗಳಿಗೆ ದಯವಿಟ್ಟು ಬೆ.ವಿ.ಕಂ. ಸಹಾಯವಾಣಿ ಸಂಖ್ಯೆ 1912ನ್ನು ಸಂಪರ್ಕಿಸಿ.

ಬೆ.ವಿ.ಕಂ. ಜಾಲತಾಣ ವಿಳಾಸ www.bescom.org ಕ್ಕೆ ಭೇಟಿ ನೀಡಿ.